**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 39 ಮುನೋಮು 2018

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 07-05-2022

**ಇವರಿಂದ**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ),
ಬೆಂಗಳೂರು.

**ಇವರಿಗೆ**

ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಛೇರಿ
ಕಂದಾಯ ಭವನ, ...
ಕೆ.ಜಿ.ರಸ್ತೆ, ಬೆಂಗಳೂರು-560009.
ಸ್ವೀಕೃತಿ ಸಂಖ್ಯೆ 299
ದಿನಾಂಕ: 11/5/2022.

**ಮಾನ್ಯರೆ,**

**ವಿಷಯ:** ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶವನ್ನು ಇ-ಆಸ್ತಿ ತಂತ್ರಾಂಶದೊಂದಿಗೆ ಸಂಯೋಜನೆಗೊಳಿಸುವ ಬಗ್ಗೆ.

**ಉಲ್ಲೇಖ:** ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪತ್ರ ಸಂಖ್ಯೆ: ಜಂ.ಆ(ಕಂ)ಪಿಆರ್:1070:2020-21 ದಿನಾಂಕ: 06-01-2021.

*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದತ್ತ ತಮ್ಮ ಗಮನ ಸೆಳೆಯಲಾಗಿದೆ. ಸದರಿ ಪತ್ರವನ್ನು ಪರಿಶೀಲಿಸಲಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವವಲಯ ವ್ಯಾಪ್ತಿಯ ಹೆಚ್.ಬಿ.ಆರ್. ಬಡಾವಣೆ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.24 ಮತ್ತು ನಾಗವಾರ ವಾರ್ಡ್ ನಂ.23ರ ಎಲ್ಲಾ ಸ್ವತ್ತುಗಳಿಗೆ ನಗರ ಪಾಲಿಕೆಯಿಂದ ವಿತರಿಸಲಾಗುವ ಕೈಬರಹದ ಖಾತಾ ಪ್ರಮಾಣಪತ್ರ/ಖಾತಾ ಉದ್ಧೃತ ಭಾಗ ಮತ್ತು ಉತ್ತರ ಪತ್ರವನ್ನು ನೋಂದಣಿಗೆ ಅಧಿಕೃತ ದಾಖಲೆಯೆಂದು ಪರಿಗಣಿಸಲು ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪ ನೋಂದಣಾಧಿಕಾರಿಗಳಿಗೆ ಸೂಚಿಸುವಂತೆ ಕೋರಿರುವುದನ್ನು ಪರಿಶೀಲಿಸಿದೆ. ಈ ಸಂಬಂಧ ಆಯುಕ್ತರು, ಯುಪಿಓಆರ್ ರವರು ಈ ಕೆಳಕಂಡಂತೆ ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ.

ಆಯುಕ್ತರು, ಯುಪಿಓಆರ್ ರವರು ಈ ವಿಷಯವನ್ನು ಪರಿಶೀಲಿಸಿದ್ದು, ಇ-ಆಸ್ತಿಯ ಪ್ರಭಾರಿ ಅಧಿಕಾರಿಯಾದ ಶ್ರೀ ಸ್ಮಾರ್ತರಾಂ, ಸೀನಿಯರ್ ಟೆಕ್ ಡೈರೆಕ್ಟರ್, ಎನ್.ಐ.ಸಿ. ಯವರೊಂದಿಗೆ ಸಹ ಚರ್ಚಿಸಿರುತ್ತಾರೆ ಹಾಗೂ ಅವರ ಅಭಿಪ್ರಾಯಗಳು ಈ ಕೆಳಗಿನಂತಿವೆ:-

1) ಇ-ಆಸ್ತಿಯನ್ನು ಮೂಲ/ಹಳೆಯ ಬಿಬಿಎಂಪಿ ಯ ವ್ಯಾಪ್ತಿಯ ಸುಮಾರು 100 ಪ್ರಮುಖ ವಾರ್ಡ್‌ಗಳಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿತ್ತು/ ಉದ್ದೇಶಿಸಲಾಗಿದೆ. ಹಳೆಯ ಬೆಂಗಳೂರು ನಗರದ ಹೊರಗಿನಿಂದ ಭಾಗಶ: ಅಥವಾ ಸಂಪೂರ್ಣವಾಗಿ ತೆಗೆದುಕೊಳ್ಳಲಾದ ಉಳಿದ 98 ವಾರ್ಡ್‌ಗಳನ್ನು ಮೊದಲ ಹಂತದ ಇ-ಆಸ್ತಿ ಜಾರಿಗೊಳಿಸಲಾಗಿರುತ್ತದೆ.

. . . 2

2) ಪ್ರಮುಖವಾಗಿ ಇದನ್ನು ಜಾರಿಗೊಳಿಸಿದ ಉದ್ದೇಶವೇನೆಂದರೆ: ನೋಂದಣಿಯ ಉದ್ದೇಶಕ್ಕಾಗಿ KAVERI ತಂತ್ರಾಂಶದೊಂದಿಗೆ ಸಮನ್ವಯಗೊಳಿಸುವುದು ಮತ್ತು ಇ-ಆಸ್ತಿಯಲ್ಲಿ ಖಾತಾ ಬದಲಾವಣೆಗಳನ್ನು ಅನುಸರಿಸುವುದು.
3) 23 ಮತ್ತು 24 ನೇಯ ವಾರ್ಡ್‌ಗಳು ಪ್ರಮುಖವಲ್ಲದ ಪ್ರದೇಶಗಳಲ್ಲಿ ಇರುವುದು ಕಂಡುಬಂದಿದೆ.
4) ಶ್ರೀ ಸ್ವಾರ್ತರಾಂ, ಸೀನಿಯರ್ ಟೆಕ್ ಡೈರೆಕ್ಟರ್, ಎನ್.ಐ.ಸಿ.ಯವರೊಂದಿಗೆ ಆಯುಕ್ತರು, ಯುಪಿಓಆರ್ ಇವರು ಸಮಾಲೋಚನೆ ನಡೆಸಿ ಮತ್ತು ಅವರು ತಿಳಿಸಿದ್ದೇನೆಂದರೆ: ಆರ್‌ಡಿಪಿಆರ್‌ನ ಇ-ಸ್ವತ್ತು ತಂತ್ರಾಂಶಕ್ಕೆ ಸಾದೃಶವಾಗಿರುವ ಇ-ಆಸ್ತಿ ತಂತ್ರಾಂಶವನ್ನು 23 ಮತ್ತು 24ನೇಯ ವಾರ್ಡ್‌ಗಳಲ್ಲಿಯೂ ಸಹ ವೈಯಕ್ತಿಕ ಸ್ವತ್ತು ದಾಖಲೆಗಳನ್ನು ವೃದ್ಧಿಸಿ ನೀಡಲು (incrementally issue) ಮತ್ತು ಹಳೆಯ/ ಗ್ರಾಮ ಪಂಚಾಯತ್/ಪುರಸಭೆಗಳ ಹೊರಗಿನ ಪ್ರದೇಶಗಳಲ್ಲಿರುವ ಅಂತಹುದೇ ಸ್ವತ್ತುಗಳಿಗಾಗಿ ಸಹ ಉಪಯೋಗಿಸಬಹುದು.
5) ಬಿಬಿಎಂಪಿಯು ಅಂತಹ ಆಸ್ತಿಗಳು ಇ-ಆಸ್ತಿಯಲ್ಲಿ ಹೇಗೆ ಆಸ್ತಿ ದಾಖಲೆಗಳನ್ನು ವೃದ್ಧಿಸಿ (incrementally) ಪಡೆಯಬಹುದು ಎಂಬುದರ ಬಗ್ಗೆ ಎಸ್‌ಓಪಿ ಯನ್ನು ನೀಡಬಹುದು. ತದನಂತರ, ಕಾವೇರಿ ತಂತ್ರಾಂಶದೊಂದಿಗೆ ಸಮನ್ವಯಗೊಳಿಸಿದರೆ, ಕಾರ್ಯ ಸುಗಮವಾಗುತ್ತದೆ. ಇ-ಆಸ್ತಿ ತಂತ್ರಾಂಶವು ಸ್ವಯಂಸಿದ್ಧವಾಗಿದೆ ಹಾಗೂ ಬಿಬಿಎಂಪಿಯು ನೀಡುವ ಎಸ್‌ಓಪಿ ಯಿಂದ ನಿರ್ದಿಷ್ಟಪಡಿಸಲಾದ ದಿನಗಳಲ್ಲಿ ಅಂದರೆ ಸುಮಾರು 10/20 ದಿನಗಳಲ್ಲಿ ಯಾವುದೇ ಆಸ್ತಿಗೆ ಖಾತೆಯನ್ನು ನೀಡಲು ಸಾಧ್ಯವಾಗುತ್ತದೆ. ಇದರಿಂದ ಇ-ಆಸ್ತಿಯ ಎಲ್ಲಾ 198 ವಾರ್ಡ್‌ಗಳಲ್ಲಿ ಸಂಪೂರ್ಣ ಜಾರಿಗೊಳಿಸುವಿಕೆಯು ಸಾಧ್ಯವಾಗುತ್ತದೆ.
6) ಇ-ಆಸ್ತಿ ಎನ್‌ಐಸಿ ತಂಡ ಮತ್ತು ಕಾವೇರಿ ತಂತ್ರಾಂಶದೊಂದಿಗೆ ಸಮನ್ವಯ ಸಾಧಿಸುವ ಒಂದು ಸಣ್ಣ ಘಟಕದೊಂದಿಗೆ ಒಂದು ವಾರ್ಡ್ ಅನ್ನು ಪರಿಶೀಲಿಸಿದೆ. ಆದುದರಿಂದ, ವಾರ್ಡ್‌ನ ಒಂದು ಭಾಗದಲ್ಲಿ ಬರವಣಿಗೆಯ ಮೂಲಕ ನೋಂದಣಿ ಮಾಡುವುದನ್ನು ಇ-ಆಸ್ತಿ ತಂತ್ರಾಂಶದಿಂದ ಬೆಂಬಲಿಸಲು/ ನಿಯಂತ್ರಿಸಲು ಸಾಧ್ಯವಿಲ್ಲ. ಒಂದು ಬಾರಿ, ಇ-ಆಸ್ತಿ ಆಧಾರಿತ ನೋಂದಣಿಯಿಂದ 23 ಮತ್ತು 24ನೇಯ ವಾರ್ಡ್‌ಗಳನ್ನು ತೆಗೆದುಬಿಟ್ಟರೆ, ಅಲ್ಲಿರುವ ಯಾವುದೇ ಆಸ್ತಿಯ ಬಗ್ಗೆ ಇ-ಆಸ್ತಿ ಖಾತೆಯಿಲ್ಲದೇ ವ್ಯವಹರಿಸಬಹುದು. ಒಂದೇ ಒಂದು ಬಡಾವಣೆಗಾಗಿ ಅಥವಾ ವಾರ್ಡ್ ಭಾಗಕ್ಕಾಗಿ ಹೀಗೆ ಮಾಡುವುದು ಸಾಧ್ಯವಿಲ್ಲ.
7) ಅತ್ಯಂತ ಹೆಚ್ಚು ಪಾರದರ್ಶಕ ಮತ್ತು ನಾಗರಿಕ ಸ್ನೇಹಿ ವ್ಯವಸ್ಥೆಗೆ ಸಾಗಬೇಕೆನ್ನುವ ದೃಷ್ಟಿಯಿಂದ 4 ಮತ್ತು 5ನೇ ಅಂಶಗಳಲ್ಲಿರುವ ಸಲಹೆಗಳನ್ನು ಪರಿಗಣಿಸಬಹುದು. ಉದಾಹರಣೆಗೆ, ಮಂಗಳೂರು ಮತ್ತು ಶಿವಮೊಗ್ಗ ನಗರಗಳಲ್ಲಿ ಯುಪಿಆರ್ ಜಾರಿಗೊಳಿಸಿದಾಗ, ಯುಪಿಆರ್ ಆಸ್ತಿ ಕಾರ್ಡ್‌ನ್ನು ಯಾರಾದರೂ ಕೋರಿದರೆ, 24 ಗಂಟೆಗಳೊಳಗಾಗಿ ಪಿಆರ್ ಕಾರ್ಡನ್ನು ಒದಗಿಸಲಾಗುವುದು ಎಂದು ವಾಗ್ದಾನ ನೀಡಲಾಗಿತ್ತು. ಈ ಮಾದರಿಯು ಶಿವಮೊಗ್ಗದಲ್ಲಿ ಸುಮಾರು ಐದು ವರ್ಷಗಳವರೆಗೆ ಕಾರ್ಯನಿರ್ವಹಿಸಿತು ಮತ್ತು 2019 ರಲ್ಲಿ ಯುಪಿಆರ್ ಪಿಆರ್ ಕಾರ್ಡ್ ಆಧಾರಿತ ನೋಂದಣಿಯನ್ನು ಕಡ್ಡಾಯವಲ್ಲ ಎಂದು ಹೇಳಿದಾಗ, ಹೊಸ ಪಿಆರ್ ಕಾರ್ಡ್‌ಗಾಗಿ ಕೇವಲ 10 ಕೋರಿಕೆಗಳು ಮಾತ್ರ ಬಾಕಿಯಿದ್ದವು. ಹಾಗೆಯೇ, ಖಾತಾ/ನಮೂನೆ-9/ನಮೂನೆ-11ರ ವೃದ್ಧಿಸಿದ ನೀಡಿಕೆಯು (incrementally issue) 2014 ರಿಂದಲೂ ಆರ್‌ಡಿಪಿಆರ್ ನ ಇ-ಸ್ವತ್ತಿನಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ.
8) 5ನೇ ಅಂಶದಲ್ಲಿ, ಬಿಬಿಎಂಪಿ ಯು ಎಸ್‌ಓಪಿ ಯನ್ನು ನೀಡಬೇಕು ಮತ್ತು ಇ-ಆಸ್ತಿಯಲ್ಲಿ ಇ-ಖಾತಾವನ್ನು ವೃದ್ಧಿಸಿ ನೀಡಲು (incrementally issue) ಇ-ಆಸ್ತಿಯು ಸಿದ್ಧವಾಗಿದೆ ಎಂದು ತಿಳಿಸಿರುವ ದೃಷ್ಟಿಯಲ್ಲಿ ಇದು ಅತ್ಯುತ್ತಮ ಪರಿಹಾರವಾಗಿದೆ.

9) ಇಲ್ಲದಿದ್ದರೆ 23 ಮತ್ತು 24 ರ ಸಂಪೂರ್ಣ ವಾರ್ಡ್‌ಗಳನ್ನು ಬಿಟ್ಟು ಬಿಡಬೇಕಾಗುತ್ತದೆ. ಕೈಬರಹದ ನೋಂದಣಿಗೆ ಅವಕಾಶ ನೀಡಬೇಕಾಗುತ್ತದೆ. ಇಂತಹ ವಿಷಮ ಪರಿಸ್ಥಿಯಲ್ಲಿ ಇದು ಉತ್ತಮ ಕ್ರಮವಲ್ಲ. ಇ-ಆಸ್ತಿಯನ್ನು ಪ್ರಾರಂಭಿಸುವ ಮೂಲಕ ವೈಯಕ್ತಿಕ ಇ-ಖಾತಾವನ್ನು ಕೊಡಲು ಬಿಬಿಎಂಪಿ ಯು ಎಸ್‌ಓಪಿ ಯನ್ನು ನೀಡಿದರೆ ಕೇವಲ ಒಂದು/ಅಧಿಕ ಲೇಔಟ್‌ಗೆ ವಿನಾಯಿತಿ ನೀಡುವುದು ಅವಶ್ಯಕವಾಗುವುದಿಲ್ಲ.

**ಮೇಲಿನ ಅಭಿಪ್ರಾಯದನ್ವಯ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.**

**ತಮ್ಮ ನಂಬುಗೆಯ,**

**(ಎ.ಜಿ.ವೀಣಾ)**

**ಸರ್ಕಾರದ ಅಧೀನ ಕಾರ್ಯದರ್ಶಿ,**

**ಕಂದಾಯ ಇಲಾಖೆ**

**(ನೋಂದಣಿ ಮತ್ತು ಮುದ್ರಾಂಕ)**

**ಪ್ರತಿ: ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, ಬೆಂಗಳೂರು.**